ಮಾಡಿಕೊಂಡಿದ್ದಾರೆ, ಆ ಒಪ್ಪಂದದ ಪ್ರಕಾರವೇ ರಾಜ್ಯ ಸರ್ಕಾರ ಕೊನೆ ಗಳಿಗೆಯವರಿಗೂ ಸಹ ಪ್ರಯತ್ನವನ್ನು ಮಾಡುತ್ತದೆ. ಯಾವುದೇ ಕಾರಣಕ್ಕೂ ನಾವು ಹಿಂದೆ ಸರಿಯುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ವಿದ್ಯಾರ್ಥಿನಿಲಯಗಳ ಸುಧಾರಣೆ

109 (1238) Sri C.T. Ravi (ಚಿಕ್ಕಮಗಳೂರು) Will the Minister for Social Welfare be pleased to state:-

a) What is the number of free hostels schemes for students of scheduled castes and backward classes and which are there;

b) How many schemes have been implemented in Chikkamagalur District. In which places of the district it is proposed to start new hostels ;

c) What is the amount released for this ;

d) To which department the implementation of all this schemes has been entrusted ;

e) Furnish the scheme wise details ?

Dr. Y. Nagappa Minister for Social Welfare :

a) Details of free hostels schemes in respect of Backward classes and scheduled castes students are indicated below.

		Number of Hostels
I.	Backward Classes Department	
	1. Goverment pre-Matric hostels	1171
	2. Government post-Matric hostels	261
	3. Grant-in-aid Pre-Matric hostels	251
	4. Grant-in-aid Post-Matric hostels	11
	5. Residential schools	22
	6. Ashram Schools	78
II.	SocialWelfare Department	
	1. Government pre-Matric hostels	1154
	2. Grant-in-aid Pre-Matric hostels	276
	3. Government post-Matric hostels	281
	4. Recognised private - College hostels run by voluntary Organisation.	87
	5. Residential schools	90

b) The details of schemes being Implemented in Chikkamagalur these are follows:

I. Backward Classes Department:

Sl. No.	Details of Hostels	Number of of hostels	Number of students
1.	Government pre matric hostels	51	2680
2.	Government Post Matric Hostels	10	625
3.	Grant-in-aid Pre Matric Hostels	11	648
4.	Grant-in-aid Post Matric Hostels	1	25
5.	Residential Schools	1	250
6.	Ashram Schools	2	75

II. Social Welfare Department:

Sl. No.	Details of Hostels	Number of of hostels	Number of students
1.	Government pre matric hostels	33	2470
2.	Government Post Matric Hostels	10	660
3.	Residential Schools	2	250

During the Current year there no proposal start New hostels / Residential schools in Chikkamagalur District.

c) The amount released by the Backward Classes Department and Social Welfare Department for this is respectively Rs. 383.93 lakhs and 316.88 lakhs respectively.

d) The schemes relating to the Maintenance of Scheduled castes and Backward Classes students hostels are being implemented by the Zilla Panchayat and Taluka Panchayat.

e) The details of the schemes implemented by the Zilla panchayat and Taluk panchayat Chikkamagalur district are indicated in Annexure-

I.

ANNEXURE-I

BACKWARD CLASSES DEPARTMENT

Sl. No.	Details of Schemes	Amount Provided / Released
1.	Maintenance of Hostels	399.23
2.	GIA to Private Hostels	12.63
3.	Stipend to Law Graduates	1.08
4.	Devaraj Urs Birthday celebration and 15 point Programme Conference	0.41
Sl. No.	**Details of Schemes**	**Amount Provided / Released**
5.	Expenditure on Construction and Maintenance	9.00
6.	Incentive to Hostellers	1.24
7.	Additional Boarding and lodging	0.50
8.	Scholarship to post-Matric and pre-Matric students	30.64
9.	Ashrama Schools	10.00
10.	Other Concessions to Backward Community	12.80

SOCIAL WELFARE DEPARTMENT

Sl. No.	Details of Schemes	Amount Provided / Released
1.	Maintenance of Government Pre-Matric hostels - plan : Non-plan	155.00
2.	Maintenance of Government Post-matric hostels - plan : Non Plan	29.61
3.	Stipend to law Graduates	2.00
4.	Maintenance of buildings	4.00
5.	Award of prize money to college students	2.00
6.	Extra boarding and lodging charges-plan: Non plan	8.45
7.	Pre/post-Matric and Merit scholarship	72.12
8.	Residential schools for scheduled caste students	119.82
9.	Supply of sewing machines	2.75

10.	Establishment of book banks	1.00
11.	Irradiation of Untouchability schemes	8.00

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ನನ್ನದೇ ಜಿಲ್ಲೆಯಲ್ಲಿ ಹೇಳಬೇಕು ಅಂದರೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಅರ್ಜಿಗಳ ಸಂಖ್ಯೆ ಎಷ್ಟು ಇತ್ತು? ಎಷ್ಟಕ್ಕೆ ಇವರು ಸೀಟು ಕೊಟ್ಟಿದ್ದಾರೆ?

ಡಾ॥ ವೈ ನಾಗಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಸರಿಯಾಗಿ ಕೇಳಿದ್ದಾರೆ. ಆದರೆ ನಮ್ಮ ಇಲಾಖೆಯವರು ಸ್ವಲ್ಪ ಉತ್ತರ ಕೊಡುವುದರಲ್ಲಿ ಎಡವಿದ್ದಾರೆ. ಸರಿಯಾದ ಉತ್ತರ ನನ್ನ ಹತ್ತಿರ ಇದೆ ಬಹುಶಃ ಮಾನ್ಯ ಸದಸ್ಯರಿಗೆ ಕೊಟ್ಟಿರಲಿಕ್ಕೆ ಇಲ್ಲ. ಸಮಾಜ ಕಲ್ಯಾಣ ಇಲಾಖೆಯಿಂದ ಸುಮಾರು 46 ಪ್ರಸ್ತಾವನೆಗಳು ಬಂದಿವೆ (11) ಕೊಪ್ಪ ತಾಲ್ಲೂಕಿನಲ್ಲಿ, (4) ಮೂಡಿಗೆರೆ ತಾಲ್ಲೂಕಿನಲ್ಲಿ (4) ನರಸಿಂಹರಾಜಪುರ ತಾಲ್ಲೂಕಿನಲ್ಲಿ (4) ಶೃಂಗೇರಿ ತಾಲ್ಲೂಕಿನಲ್ಲಿ (1) ತರೀಕೆರೆ ತಾಲ್ಲೂಕಿನಲ್ಲಿ ಬೇಡಿಕೆಗಳು ಬಂದಿವೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಮಾನ್ಯ ಸಚಿವರಿಗೆ ಗೊತ್ತಾಗಲಿಲ್ಲವೆಂದು ನಾನು ಭಾವಿಸಿದ್ದೇನೆ. ನಾನು ಕೇಳಿದ್ದು ನನ್ನ ಜಿಲ್ಲೆ ಒಳಗಡೆ 8 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಇವೆ. ಹಿಂದುಳಿದ ವರ್ಗದ್ದು, ಅರ್ಜಿಗಳ ಸಂಖ್ಯೆ ನೂರಾರು ಇದ್ದರೆ ಸೀಟು ಕೊಟ್ಟಿರುವುದು 50, 40 ಮಾತ್ರ. ಆದರೆ ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಹೊಸ ವಿದ್ಯಾರ್ಥಿ ನಿಲಯಗಳನ್ನು ಅಥವಾ ಹೆಚ್ಚುವರಿ ವಸತಿ ನಿಲಯಗಳನ್ನು ಸ್ಥಾಪಿಸತಕ್ಕಂಥ ಅಗತ್ಯ ಕಂಡು ಬಂದಿಲ್ಲ ಎಂದು ಹೇಳಿದ್ದಾರೆ. ನಮಗೆ ಒಂದು ಹಾಸ್ಟೆಲ್ ಸೀಟು ಕೊಡಿಸುವುದು ಮೆಡಿಕಲ್ ಸೀಟು ಕೊಡಿಸುವುದಕ್ಕಿಂತ ಹೆಚ್ಚು ಡಿಮ್ಯಾಂಡ್. ಏಕೆಂದರೆ ದೂರ ದೂರದ ಮಲೆನಾಡು ಗುಡ್ಡಗಾಡು ಪ್ರದೇಶದಿಂದ, ದೂರದಿಂದ ಬಂದು ಓದುವುದಕ್ಕೆ ಬರುತ್ತಾರೆ. ಕಾಲೇಜಿನಲ್ಲಿ ಸೀಟು ಸಿಗುತ್ತದೆ, ಹಾಸ್ಟೆಲ್‌ನಲ್ಲಿ ಸೀಟು ಇಲ್ಲ. ಅವರು ಹಳ್ಳಿಯಿಂದ ಬರಬೇಕು ಅಂದರೆ ಕಾಲೇಜಿಗೆ ಬರಬೇಕೆಂದರೆ ಬಸ್ಸಿನ ಸೌಕರ್ಯ ಸಹ ಇಲ್ಲ. ಇದು ಅಲ್ಲಿನ ಪರಿಸ್ಥಿತಿ. ಅದಕ್ಕೆ ನಾನು ಸಮಾಜ ಕಲ್ಯಾಣ ಸಚಿವರಿಗೆ ತಮ್ಮ ಮೂಲಕ ಗಮನ ಸೆಳೆಯುವುದಕ್ಕೆ ಬಯಸುವುದೇನೆಂದರೆ ಇಷ್ಟು ಪ್ರಮಾಣದ ಬೇಡಿಕೆ ಇರಬೇಕಾದರೆ ಹೆಚ್ಚುವರಿ ವಸತಿ ನಿಲಯಗಳನ್ನು ತೆರೆಯಲಿಕ್ಕೆ ಅಥವಾ ಸ್ಥಳವಾಕಾಶಗಳನ್ನು ಕಲ್ಪಿಸಿಕೊಡಲಿಕ್ಕೆ ಆಗುವುದಿಲ್ಲವೇ ಎನ್ನತಕ್ಕಂಥ ಪ್ರಶ್ನೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಡಾ॥ ವೈ. ನಾಗಪ್ಪ: ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಪೂರ್ಣ ಮಾಹಿತಿ ತರಿಸಿಕೊಂಡು ಸಧ್ಯ ಅವರು ಕೇಳಿರುವ ಪ್ರಶ್ನೆಗೆ ನಮ್ಮ ಆಯವ್ಯಯದಲ್ಲಿ ಹೋದ ವರ್ಷ ಹಣಕಾಸು ಲಭ್ಯವಿರಲಿಲ್ಲ. ನಾನು ಈಗಾಗಲೇ ನಮ್ಮ ಉಪ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಅವರು ಈ ಸಲದ ಬಜೆಟ್‌ನಲ್ಲಿ ಹಣ ಒದಗಿಸಿಕೊಡುತ್ತೇನೆಂದು ಹೇಳಿದ್ದಾರೆ, ಖಂಡಿತವಾಗಿ ಹಾಸ್ಟಲ್ ಸೌಲಭ್ಯಕ್ಕೆ ಹೆಚ್ಚು ಅನುದಾನ ಕೊಟ್ಟು ಆದಷ್ಟು ಹಾಸ್ಟಲ್‌ಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೇ, ಹಾಸ್ಟಲ್‌ಗಳಲ್ಲಿ ನಕ್ಸಲೀಯರು ಪುಕ್ಕಟೆ ಉಂಡು ವಿದ್ಯಾರ್ಥಿಗಳ ತಲೆ ಕೆಡಿಸುತ್ತಿದ್ದಾರೆಂದು ಇವತ್ತಿನ ಪತ್ರಿಕೆಗಳಲ್ಲಿ ವರದಿಯಾಗಿದೆ, ನಿನ್ನೆ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಸಹ ಚರ್ಚೆಯಾಗಿದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಮಾತು ಮಾತಿಗೂ ನಕ್ಸಲೀಯರು, ನಕ್ಸಲೀಯರು ಎಂದು.

ಶ್ರೀ ಸಿ.ಟಿ. ರವಿ: ನಿಮಗೇಕೆ ಅಷ್ಟು ಪ್ರೀತಿ? ನನಗೆ ಅರ್ಥವಾಗುತ್ತಿಲ್ಲ. ಆದರೆ ನನ್ನ ಕ್ಷೇತ್ರದಲ್ಲಿ ಅದು ಸಮಸ್ಯೆ. ಇವರ ಕ್ಷೇತ್ರದಲ್ಲಿ ಅವರಿಗೆ ಪ್ರೀತಿಪಾತ್ರರು ನಕ್ಸಲೀಯರು ಆದರೆ ನನ್ನ ಕ್ಷೇತ್ರದಲ್ಲಿ ಜನರಿಗೆ ಸಮಸ್ಯೆಯನ್ನುಂಟು ಮಾಡುತ್ತಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ನಕ್ಸಲೀಯರ ಬಗ್ಗೆ ಕಲ್ಪನೆ ಇಲ್ಲ ನಿಮಗೆ....

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೇ, ಹಾಸ್ಟಲ್‌ಗಳ ಬಗ್ಗೆ ನಿನ್ನೆ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ ಸಭೆಯಲ್ಲಿ ಚರ್ಚೆಯಾಗಿದೆ.

ಅಧ್ಯಕ್ಷರು: ಮಾನ್ಯ ರವಿಯವರೇ, ಪ್ರಶ್ನೆಗೆ ಸಂಬಂಧಪಟ್ಟಂತೆ ಉಪ ಪ್ರಶ್ನೆ ಕೇಳಬಹುದೇ ಹೊರತು ನಕ್ಸಲೀಯರದ್ದು ಬೇರೆ ಪ್ರಶ್ನೆಯಾಗುತ್ತದೆ. ದಯಮಾಡಿ ಕೇಳಿ ಆ ಸಂಬಂಧಪಟ್ಟಂತೆ ಸಮಾಜ ಕಲ್ಯಾಣ ಸಚಿವರ ಜೊತೆ ಮಾತನಾಡಿ. ಇದಕ್ಕೆ ಸಂಬಂಧಪಟ್ಟಂತೆ ಉಪ ಪ್ರಶ್ನೆಗಳು ಏನಾದರೂ ಇದ್ದರೆ ಕೇಳಿ.

ಶ್ರೀ ಸಿ.ಟಿ. ರವಿ: ಖಂಡಿತ ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆಯೇ.....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಿನ್ನೆ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಈ ವಿಷಯ ಚರ್ಚೆಯಾಗಿದೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಈ ಪ್ರಶ್ನೆಗೆ ಅವರು ಏನು ಹೇಳುತ್ತಾರೆ?

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೇ, ನಿನ್ನೆ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಚರ್ಚೆಯಾಗಿದೆ. ಹಾಸ್ಟೆಲ್‌ಗಳಲ್ಲಿ ನಕ್ಸಲೀಯರು ಸರ್ಕಾರದಿಂದ ಪುಕ್ಕಟೆಯಾಗಿ ಊಟ ಮಾಡಿಕೊಂಡಿದ್ದು ಅಲ್ಲದೇ ವಿದ್ಯಾರ್ಥಿಗಳ ತಲೆ ಕೆಡಿಸುತ್ತಿದ್ದಾರೆಂದು ನಿನ್ನೆ ಜಿಲ್ಲಾ ಪಂಚಾಯತ್ ಸದಸ್ಯರು ಅದೂ ಇವರದ್ದೇ ಕಾಂಗ್ರೆಸ್ಸ್ ಪಕ್ಷದ ಸದಸ್ಯರು ಚರ್ಚೆ ಮಾಡಿದ್ದಾರೆ. ಹಾಗಾಗಿ ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅದನ್ನು ನಿಯಂತ್ರಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತಾರೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ಜೀವರಾಜ್‌ರವರೇ, ಈ ರೀತಿ ಪದೇ ಪದೇ ಸುಮ್ಮನೆ ನಿಂತುಕೊಳ್ಳುವುದು ಇದು ಸರಿಯಾದ ಕ್ರಮ ಅಲ್ಲ. ಒಂದಲ್ಲ ಹತ್ತಾರು ಸಲ ಹೇಳಬೇಕೇನು? ದಯಮಾಡಿ ಕುಳಿತುಕೊಳ್ಳಿ. ಅವರ ಪ್ರಶ್ನೆಗೆ ಉತ್ತರ ಹೇಳುತ್ತಾರೆ ಕುಳಿತುಕೊಳ್ಳಿ.

ಡಾ॥ ವೈ. ನಾಗಪ್ಪ: ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಪೂರ್ಣ ಮಾಹಿತಿ ಇವತ್ತು ನನ್ನಲ್ಲಿ ಇಲ್ಲ. ಅದನ್ನು ತರಿಸಿಕೊಂಡು ನಮ್ಮ ಗೃಹ ಮಂತ್ರಿಗಳ ಜೊತೆ ಚರ್ಚೆ ಮಾಡಿ ಅದನ್ನು ನಿಯಂತ್ರಣಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ಜಾತಿಗಳು

110 (1418) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಪಟ್ಟಿಗೆ ಈಗಾಗಲೆ ಸೇರಿಸಲ್ಪಟ್ಟ ಜಾತಿಗಳ ಸಂಖ್ಯೆ ಎಷ್ಟು ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿಸಬೇಕೆಂದು ಮನವಿ